ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ
ದೂರವಾಣಿ ಸಂಖ್ಯೆ: 080-224600, 224023 ಫ್ಯಾಕ್ಸ್ ಸಂಖ್ಯೆ: 080-224171 ಇ-ಮೇಲ್ ವಿಳಾಸ: dcmandya09@gmail.com

ಸಂಖ್ಯೆ:**MDC-RHA0EST2/374/2023** ದಿನಾಂಕ: **11/03/2025.**

ಅಧಿಕೃತ ಜ್ಞಾಪನ

ವಿಷಯ: ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕ, ನಿಷೇಧಿಸುವಿಕ ಮತ್ತು ನಿವಾರಿಸುವಿಕೆ)-2013 ರ ಕಾಯ್ದೆಯಡಿ ಆಂತರಿಕ ದೂರು ಸಮಿತಿ ರಚನೆಯಾಗಿರುವ ಸಂಬಂಧ ಸರ್ವೆ ನಡೆಸಲು ಅಧಿಕಾರಿಯನ್ನು ನಿಯೋಜಿಸುವ ಬಗ್ಗೆ.

ಉಲ್ಲೇಖ: 1) ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರುರವರ ಟಿಪ್ಪಣಿ ಸಂಖ್ಯೆ: ಕರಾಮಆ/SHW/2024-25, ದಿನಾಂಕ: 25/02/2025.

****

ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರುರವರ ಉಲ್ಲೇಖಿತ ಟಿಪ್ಪಣಿಯಲ್ಲಿ ದಿನಾಂಕ: 04/02/2025 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ **"POSH" ಅಧಿನಿಯಮ 2013 ರ ಸಂಬಂಧ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದಲ್ಲಿ ನೀಡಲಾದ ನಿರ್ದೇಶನಗಳ ರೀತ್ಯಾ ಕ್ರಮವಹಿಸುವ ಸಂಬಂಧ** ದಿನಾಂಕ:31.03.2025 ರೊಳಗೆ ಎಲ್ಲಾ ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಯಲ್ಲಿನ 10 ಹಾಗೂ 10 ಕ್ಕಿಂತ ಹೆಚ್ಚು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ, ಸಾರ್ವಜನಿಕ/ಖಾಸಗಿ ವಲಯದ ಎಲ್ಲಾ ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿಗಳು ರಚಿಸಿರುವ ಬಗ್ಗೆ ಸರ್ವೆ ಮಾಡಿ, ಎಲ್ಲಾ ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿಗಳು ರಚನೆಯಾಗಿದೆಯೇ ಅಥವಾ ಇಲ್ಲವೇ ಎಂದು ಪರಿಶೀಲಿಸುವುದು, ರಚನೆಯಾಗಿರುವ ಆಂತರಿಕ ದೂರು ಸಮಿತಿಯ ವಿವರಗಳನ್ನು "SHe-Box Portal'ನಲ್ಲಿ ಅಳವಡಿಸಲು ಕ್ರಮವಹಿಸುವುದು ಹಾಗೂ ಆಂತರಿಕ ದೂರು ಸಮಿತಿಗಳು ರಚನೆಯಾಗಿಲ್ಲದೇ ಇರುವ ಸಂಸ್ಥೆಗಳಿಗೆ POSH ಅಧಿನಿಯಮದ ಕಲಂ 26ರ ಪ್ರಕಾರ ಕ್ರಮವಹಿಸಿ, ಸದರಿ ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿಗಳು ರಚನೆಯಾಗಲು ಕ್ರಮವಹಿಸುವುದು.

ಮೇಲ್ಕಂಡ ರೀತ್ಯಾ ಕ್ರಮವಹಿಸಿ, ಕರ್ನಾಟಕ ರಾಜ್ಯ ಮಹಿಳಾ ಆಯೋಗಕ್ಕೆ ಲಿಖಿತ ರೂಪದಲ್ಲಿ ದಿನಾಂಕ:01.04.2025ರೊಳಗೆ ವರದಿಯನ್ನು ಸಲ್ಲಿಸಲು ಸೂಚಿಸಲಾಗಿರುತ್ತದೆ.

ಉಲ್ಲೇಖಿತ ಪತ್ರದ ಹಾಗೂ ಲಗತ್ತಿರುವ ನಡವಳಿಯನ್ವಯ ಕ್ರಮವಹಿಸುವ ಸಂಬಂಧ **ಶ್ರೀ ರಾಜಮೂರ್ತಿ, ಉಪ ನಿರ್ದೇಶಕರು, ಮಹಿಳಾ ಮಕ್ಕಳ ಮತ್ತು ಕಲ್ಯಾಣ ಇಲಾಖೆ, ಮಂಡ್ಯ ರವರನ್ನು ನಿಯೋಜಿಸಿ ಆದೇಶಿಸಿದೆ**. ನಿಯೋಜಿತ ಅಧಿಕಾರಿಗಳು, ಈ ಕೆಳಕಂಡ ರೀತ್ಯಾ ಕ್ರಮವಹಿಸಿ, ನಡವಳಿಯ ಸೂಚನೆಯ ರೀತ್ಯಾ ದಿನಾಂಕ: 30/03/2025 ರ ಅಂತ್ಯದೊಳಗೆ ಈ ಕಛೇರಿಗೆ ಮುದ್ದಾಂ ವರದಿ ಸಲ್ಲಿಸಲು ಸೂಚಿಸಿದೆ.

1. ಜಿಲ್ಲೆಯಲ್ಲಿ ಸರ್ಕಾರಿ ಹಾಗೂ ಖಾಸಗಿ ವಲಯದ ಪ್ರತೀ ಸಂಸ್ಥೆಗಳಲ್ಲಿಯೂ ಆಂತರಿಕ ದೂರು ಸಮಿತಿ ರಚನೆಯಾಗಿರುವ ಬಗ್ಗೆ ಸರ್ವೆ ನಡೆಸುವುದು.

2. ರಚನೆಯಾಗಿರುವ ಆಂತರಿಕ ದೂರು ಸಮಿತಿಯ ಮಾಹಿತಿಯನ್ನು "SHe-Box Portal'ನಲ್ಲಿ ಅಳವಡಿಸುವುದು.

3. ಜಿಲ್ಲೆಯಲ್ಲಿನ 10 ಹಾಗೂ 10 ಕ್ಕಿಂತ ಹೆಚ್ಚು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ ಹಾಗೂ ಖಾಸಗಿ ವಲಯದ ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿ ರಚನೆಯಾಗದಿದ್ದಲ್ಲಿ POSH ಅಧಿನಿಯಮದ ಕಲಂ 26ರ ಪ್ರಕಾರ ಕೂಡಲೇ ರಚನೆ ಮಾಡಲು ಸೂಕ್ತ ನಿರ್ದೇಶನ ನೀಡಿ, ರಚನೆ ಮಾಡಿಸಿ, ಮಾಹಿತಿಯನ್ನು "SHe-Box Portal'ನಲ್ಲಿ ಅಳವಡಿಸುವುದು.

--2)

Scanned with ACE Scanner

4. ಜಿಲ್ಲೆಯಲ್ಲಿನ 10 ಹಾಗೂ 10 ಕ್ಕಿಂತ ಹೆಚ್ಚು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ ಹಾಗೂ ಖಾಸಗಿ ವಲಯದ ಸಂಸ್ಥೆಗಳಲ್ಲಿ ಸ್ಥಳೀಯ ದೂರು ಪ್ರಾಧಿಕಾರ ರಚನೆಯಾಗಲು ಕ್ರಮವಹಿಸುವುದು.

5. ಜಿಲ್ಲಾದ್ಯಂತ ಸಂಪೂರ್ಣ ಸರ್ವೆ ಹಾಗೂ ಮಾಹಿತಿ ಅಳವಡಿಕೆಯನ್ನು ದಿನಾಂಕ: 30/03/2025ರೊಳಗೆ ಮುಗಿಸಿ, ಅಂದೇ ಕ್ರೋಢೀಕೃತ ವರದಿಯನ್ನು ಸಲ್ಲಿಸತಕ್ಕದ್ದು.

ಜಿಲ್ಲಾಧಿಕಾರಿ
ಮಂಡ್ಯ ಜಿಲ್ಲೆ, ಮಂಡ್ಯ.

<u>ಪ್ರತಿಯನ್ನು ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ/ಕಳುಹಿಸಿದೆ:</u>

1. ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ.
3. ಆರಕ್ಷಕ ಅಧೀಕ್ಷಕರು, ಮಂಡ್ಯ ಜಿಲ್ಲೆ, ಮಂಡ್ಯ.
4. ಶ್ರೀ ರಾಜಮೂರ್ತಿ, ಉಪ ನಿರ್ದೇಶಕರು, ಮಹಿಳಾ ಮಕ್ಕಳ ಮತ್ತು ಕಲ್ಯಾಣ ಇಲಾಖೆ, ಮಂಡ್ಯ.
5. ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯರವರಿಗೆ ಕಳುಹಿಸುತ್ತಾ ಪ್ರಸ್ತಾಪಿತ ಕಾರ್ಯಕ್ಕೆ ನಿಯೋಜಿತ ಅಧಿಕಾರಿಗಳಿಗೆ ಸೂಕ್ತ ಸಹಕಾರ ನೀಡಲು ಸೂಚಿಸಿದೆ.
6. ಕಛೇರಿ ಪ್ರತಿ.

Scanned with ACE Scanner